**ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ-6 ನಿಯಮ -17 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಮೇಲೆ ಆದೇಶ**

ಅರ್ಜಿದಾರ/ ವಾದಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ, ವಾದಪತ್ರದಲ್ಲಿ ತಿದ್ದುಪಡಿ ಮಾಡುವ ಮೂಲಕ ಕೆಲವೊಂದು ಸಂಗತಿಗಳನ್ನು ಹಾಗೂ ಪ್ರಾರ್ಥನೆಯನ್ನು ಸೇರಿಸಲು ವಿನಂತಿಸಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ದಾವೆ ಚಾಲ್ತಿಯಲ್ಲಿದ್ದಾಗ ಪ್ರತಿವಾದಿಯರು ಬೇಕಾಯ್ದೆಶೀರ ರೀತಿಯಿಂದ ದಾವಾಸ್ತಿ ಮೇಲೆ ಕಟ್ಟಡ ನಿರ್ಮಿಸಿರುತ್ತಾರೆ. ಕಾರಣ ಈ ಕುರಿತು ಮುಂದುವರೆದ ಪ್ರಾರ್ಥನೆಯಲ್ಲಿ ದಾವಾಸ್ತಿ ಮೇಲೆ ನಿರ್ಮಿಸಿದ ಕಟ್ಟಡ ತೆಗೆದು ಹಾಕುವ ಕುರಿತು ಮಾಗಣಿ ಮಾಡಲು ಅತೀ ಅವಶ್ಯವಿದ್ದು, ಸದರಿ ತಿದ್ದುಪಡಿಯು ದಾವೆ ಚಾಲ್ತಿಯಲ್ಲಿದ್ದ ಬದಲಾವಣೆಯಿಂದ ಉದ್ಭವಿಸಿರುವುದರಿಂದ ತಿದ್ದುಪಡಿಗೆ ಅನುಮತಿಸಿದರೆ ಪ್ರತಿವಾದಿಯರಿಗೆ ತೊಂದರೆ ವ, ಹಾನಿ ಉಂಟಾಗಲಾರದೆಂದು ತಿಳಿಸಿರುತ್ತಾರೆ.

3. ಸದರಿ ಮಧ್ಯಂತರ ಅರ್ಜಿಗೆ ಪ್ರತಿವಾದಿ ಪರ ತಕರಾರು ಸಲ್ಲಿಸಿ, ಅರ್ಜಿಯನ್ನು ಸಿವಿಲ್ ರೂಲ್ಸ್ ಆಫ್ ಪ್ರಾಕ್ಟೀಸ್‌ಗೆ ಅನುಗುಣವಾಗಿ ಸಲ್ಲಿಸಿರುವುದಿಲ್ಲ. ಪ್ರಮಾಣಪತ್ರದಲ್ಲಿ ತಿಳಿಸಿದ ಸಂಗತಿಗಳು ಅಪೂರ್ಣ ಮತ್ತು ಸುಳ್ಳಿನಿಂದ ಕೂಡಿದ್ದು, ಅರ್ಜಿಯನ್ನು ಪುರಸ್ಕರಿಸಿದರೆ ದಾವೆಯ ಸ್ವರೂಪವೇ

ಬದಲಾಗುತ್ತದೆ. ಪ್ರಸ್ತುತ ಅರ್ಜಿಯನ್ನು ದಾವೆಯಲ್ಲಿ ವಿಳಂಬ ಮಾಡುವ ಉದ್ದೇಶದಿಂದ ಸಲ್ಲಿಸಿದ್ದು ವಜಾಮಾಡಲು ವಿನಂತಿಸಿರುತ್ತಾರೆ.

**4.** ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ , ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ........

**ಅಂಶಗಳು**

1. ಮಧ್ಯಂತರ ಅರ್ಜಿ ಮೇಲೆ ಕೇಳಿದ ಪರಿಹಾರ ಪಡೆಯಲು ವಾದಿ ಅರ್ಹನಿರುತ್ತಾನೆಯೇ?
2. ಯಾವ ಆದೇಶ ?

**5.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ನಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

**6.** **ಅಂಶ ನಂ.1**:- ದಾವಾಸ್ತಿಯಲ್ಲಿ ಪ್ರತಿವಾದಿಯರು ಅಕ್ರಮ ಕಟ್ಟಡ ನಿರ್ಮಿಸದಂತೆ ವಾದಿ ದಾವೆಯಲ್ಲಿ ಮಾಗಣಿ ಮಾಡಿರುತ್ತಾರೆ. ದಾವೆಯಲ್ಲಿ ಪ್ರತಿವಾದಿಯರ ಪರ ಸಾಕ್ಷಿಗಾಗಿ ನೇಮಿಸಿದಾಗ ವಾದಿ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತಾರೆ. ದಾವೆ ಚಾಲ್ತಿಯಲ್ಲಿದ್ದಾಗ ಪ್ರತಿವಾದಿಯರು ಯಾವುದೇ ಕಟ್ಟಡ ಮಾಡುವುದಿಲ್ಲವೆಂದು ನ್ಯಾಯಾಲಯದ ಮುಂದೆ ತಿಳಿಸಿದಾಗ್ಯೂ ಸಹ ಗ್ರಾಮ ಪಂಚಾಯತಿ ಪರವಾನಿಗೆ ಪಡೆಯದೇ ದಾವೆ

ಚಾಲ್ತಿಯಲ್ಲಿದ್ದಾಗ ಮನೆ ನಿರ್ಮಿಸಿಕೊಂಡಿರುತ್ತಾರೆ. ಒಂದು ವೇಳೆ ಸದರಿ ಮನೆ ಕಟ್ಟಿಕೊಂಡ ಆಸ್ತಿ ವಾದಿಯರ ಹಿಸ್ಸೆಗೆ ಬಂದರೆ ಅದನ್ನು ತೆಗೆದುಹಾಕಲು ಪ್ರತಿವಾದಿ ಬಾಧ್ಯಸ್ಥನಿರುವುದರಿಂದ ಈ ಕುರಿತು ದಾವೆಯಲ್ಲಿ ನಿರ್ದೇಶನಾತ್ಮಕ ಮನಾಯಿ ಪ್ರಾರ್ಥನೆ ತಿದ್ದುಪಡಿ ಮುಖಾಂತರ ಸೇರ್ಪಡೆಗೊಳಿಸುವುದು ಅವಶ್ಯವಿರುತ್ತದೆಂದು ವಾದಿ ಪರ ಅರ್ಜಿಯಲ್ಲಿ ತಿಳಿಸಿರುತ್ತಾರೆ.

**7.** ದಾವಾಸ್ತಿಯು ವಾದಿ ಪ್ರತಿವಾದಿಯರ ಸಾಮೂಹಿಕ ಆಸ್ತಿ ಇದ್ದು, ಇದುವರೆಗೂ ಎಫ್ ಡಿ ಪಿ ಮುಖಾಂತರ ಪ್ರತ್ಯಕ್ಷ ಕಬ್ಜೆ ವಹಿವಾಟಿ ಪಡೆದಿರುವುದಿಲ್ಲವೆಂದು ದಾವೆಯ ಎರಡು ಪಕ್ಷಗಾರರು ತಿಳಿಸಿರುತ್ತಾರೆ. ಸದರಿ ಪ್ರಾಥಮಿಕ ಡಿಕ್ರಿ ಅನುಸಾರ ಅಂತಿಮ ಡಿಕ್ರಿ ಪ್ರಕ್ರಿಯೆಯಲ್ಲಿ ಪಕ್ಷಗಾರರು ತಮ್ಮ ತಮ್ಮ ಹಿಸ್ಸೆಯ ಕುರಿತು ಹಿತಾಸಕ್ತಿಗಳನ್ನು ಸಾಧಿಸಲು ಅವಕಾಶವಿರುತ್ತದೆ. ಕಾರಣ ದಾವೆಯ ಪಕ್ಷಗಾರರು ದಾವಾಸ್ತಿಯಲ್ಲಿರುವ ತಮ್ಮ ಹಿಸ್ಸೆಯ ಕುರಿತಾದ ಹಕ್ಕುಗಳನ್ನು ಸ್ಥಾಪಿಸಲು ಅಂತಿಮ ಡಿಕ್ರಿ ಮಾಡಿಕೊಳ್ಳುವ ಸಮಯದಲ್ಲಿ ಸ್ವತಂತ್ರರಿರುವುದರಿಂದ ಪ್ರಸ್ತುತ ಪ್ರಕರಣದಲ್ಲಿ ನಿರ್ದೇಶನಾತ್ಮಕ ಮನಾಯಿ ಕುರಿತು ಮಾಡಿದ ಮಾಗಣಿ ಊರ್ಜಿತಗೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಕಾರಣ ಅಂಶ ನಂ. 1 ಕ್ಕೆ **"ನಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

8. **<u>ಅಂಶ ನಂ.2ಃ</u>** ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**<u>ಆದೇಶ</u>**

ಮಧ್ಯಂತರ ಅರ್ಜಿ ನಂ. 3 ನ್ನು ರೂ. 200/- ಖರ್ಚಿನ ಮೇರೆಗೆ ವಜಾಗೊಳಿಸಲಾಗಿದೆ.

ಪ್ರತಿವಾದಿಯರ ಪರ ಸಾಕ್ಷಿಗಾಗಿ ಪ್ರಕರಣವನ್ನು ನಂತರ ಕರೆಯಿರಿ.

Sd/-

**ದಿವಾಣಿ ನ್ಯಾಯಾಲಯ , ಅಂಕೋಲಾ**